# ಗೊಮ್ಮಟವಾಣಿ

44ನೇ ವರ್ಷದ ಪ್ರಕಾಶನದತ್ತ

ಅಹಿಂಸೆಯಿಂದ ಸುಖ, ತ್ಯಾಗದಿಂದ ಶಾಂತಿ * ಮೈತ್ರಿಯಿಂದ ಪ್ರಗತಿ, ಧ್ಯಾನದಿಂದ ಸಿದ್ಧಿ *

ಅಂತಿಮ ಶ್ರುತಕೇವಲಿ ಶ್ರೀ ಭದ್ರಬಾಹು ಚರಣ

ಸ್ಥಾಪನೆ : 01.01.1980 ಧಾರ್ಮಿಕ ಪಾಕ್ಷಿಕ ಪತ್ರಿಕೆ

ದಿನಾಂಕ : 01.11.2023 : ಶ್ರವಣಬೆಳಗೊಳ ಪ್ರಧಾನ ಸಂಪಾದಕರು : ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯವರ್ಯ ಸ್ವಾಮಿಗಳವರು ವೀರಸಂವತ್ : 2549 ಪುಟಗಳು : 6

ಸಂಪುಟ : 17 ಸಂಚಿಕೆ : 21 ಸೋಪಾನ : 1048 RNI No. KARKAN/2008/28274 Postal Regn. No. HSN/765/2021-23 WPP : No. SK/wpp/HSN-109/2021-23


## ಜಿನಭಾಷಿತ

ಸೂಈ ಜಹಾ ಸಸುತ್ತಾ, ಣ ಣಸ್ಸಈ
ಕಯ–ವರಮ್ಮಿ ಪಡಿಆ ವಿ ।
ಜೀವೋ ವಿ ತಹ ಸಸುತ್ತೋ, ಣ ಣಸ್ಸಇ
ಗಓ ವಿ ಸಂಸಾರೇ ॥ ಸಮಣಸುತ್ತಂ, ಸಮ್ಮತ್ತಣಾಣ ಸುತ್ತ–248

ಹೇಗೆ ದಾರಕ್ಕೆ ಪೋಣಿಸಿದ ಸೂಚಿಯು ಕೆಳಗೆ ಬಿದ್ದರೂ ಕಳೆಯುವುದಿಲ್ಲ ಹಾಗೆ ಶಾಸ್ತ್ರಜ್ಞಾನಯುಕ್ತ ಜೀವನು ಸಂಸಾರದಲ್ಲಿ ಇದ್ದರೂ ನಾಶವಾಗುವುದಿಲ್ಲ.

## ಶ್ರೀಕ್ಷೇತ್ರ ಶ್ರವಣಬೆಳಗೊಳ

: ವಿಂಧ್ಯಗಿರಿ ದರ್ಶನದ ಸಮಯ :
ಬೆಳಗ್ಗೆ 6–30 ರಿಂದ ಸಂಜೆ 6–00ರವರೆಗೆ
ಪೂಜಾ ಸಮಯ
ಬೆಳಗ್ಗೆ 8–00 ರಿಂದ ಬೆಳಗ್ಗೆ 10–00ರವರೆಗೆ
ದೂರವಾಣಿ : 9008954636

: ಶ್ರೀಮಠ ದರ್ಶನ ಸಮಯ :
ಬೆಳಗ್ಗೆ 6–30 ರಿಂದ ರಾತ್ರಿ 8–00ರವರೆಗೆ
ಪೂಜಾ ಸಮಯ
ಬೆಳಗ್ಗೆ 7–00 ರಿಂದ ಬೆಳಗ್ಗೆ 9–00ರವರೆಗೆ
ದೂರವಾಣಿ : 9844143722

: ಶ್ರೀಮಠದ ಕಛೇರಿ :
ದೂರವಾಣಿ : 8431560480

: ವಸತಿ ವಿಭಾಗದ ಕಛೇರಿ :
ದೂರವಾಣಿ : 9353667645

: ಅಕ್ಷಯ ಶ್ರಾವಕ ಸತ್ಕಾರ ಭೋಜನಾಲಯದ ಸಮಯ :
ಉಪಹಾರ : ಬೆಳಗ್ಗೆ 08.00 ರಿಂದ 09.30ರವರೆಗೆ
ಭೋಜನ : 10.30 ರಿಂದ ಮಧ್ಯಾಹ್ನ 03.00
ಸಂಜೆ : 04.30 ರಿಂದ 06.30 ರವರೆಗೆ

**ಹೊರೆಕಾಣಿಕೆ ಸ್ವೀಕರಿಸಲಾಗುವುದು**

ವರ್ಣಮುದ್ರಿತ ಗೊಮ್ಮಟವಾಣಿ ಪತ್ರಿಕೆ ನಿಮ್ಮ ಮನೆಗೆ ತಲುಪುತ್ತಿಲ್ಲವೇ....?
ಸಂಪರ್ಕಿಸಿ : 8660118443
ವಾರ್ಷಿಕ ಚಂದಾ : ರೂ. 250–00
ಆಜೀವ ಸದಸ್ಯತ್ವ : ರೂ. 2,500–00

ಶ್ರೀಕ್ಷೇತ್ರಕ್ಕೆ ಆಹಾರ, ಔಷಧ, ವಿದ್ಯಾದಾನಕ್ಕೆ ಈ ಕೆಳಕಂಡ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ದಾನ ನೀಡಬಹುದು

Paytm G Pay PhonePe

## ಶ್ರೀಕ್ಷೇತ್ರ ಶ್ರವಣಬೆಳಗೊಳದಲ್ಲಿ ಶರನ್ನವರಾತ್ರಿ ವಿಶೇಷ ಪೂಜೆ






ಶ್ರವಣಬೆಳಗೊಳ, ಅ 23 : ಶ್ರೀಕ್ಷೇತ್ರ ಶ್ರವಣಬೆಳಗೊಳದಲ್ಲಿ ಶರನ್ನವರಾತ್ರಿ ಪ್ರಯುಕ್ತ ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳವರ ನೇತೃತ್ವದಲ್ಲಿ ಅಕ್ಟೋಬರ್ 15 ರಿಂದ ಅಕ್ಟೋಬರ್ 24ರವರೆಗೆ ವಿಶೇಷ ಪೂಜಾ ಕಾರ್ಯಕ್ರಮಗಳು ಪ್ರತಿನಿತ್ಯ ನೆರವೇರಿದವು. ಪ್ರತಿದಿನ ಬೆಳಗ್ಗೆ ಶ್ರೀಮಠದ ಬಸದಿಯಲ್ಲಿ ಶ್ರೀ ಸರಸ್ವತಿ ದೇವಿಗೆ ವಿಶೇಷ ಪಂಚಾಮೃತ ಅಭಿಷೇಕ ಸಂಜೆ ವಿಶೇಷ ಅಲಂಕಾರ, ಷೋಡಶೋಪಚಾರ ಪೂಜೆ ಹಾಗೂ ಅಷ್ಟಾವಧಾನ ಕಾರ್ಯಕ್ರಮಗಳು, ನವದೇವತೆಗಳ ವಿಶೇಷ ಅಲಂಕಾರ ಪೂಜೆ ಹಾಗೂ ವಿಜಯದಶಮಿಯಂದು ಪರಂಪರೆಯಂತೆ ಶ್ರೀಮಠದಿಂದ ಸರ್ವಾಹ್ಣಯಕ್ಷ ಹಾಗೂ ಶ್ರೀ ಆಮ್ರ ಕೂಷ್ಮಾಂಡಿನಿ ದೇವಿ ಪಲ್ಲಕ್ಕಿ ಉತ್ಸವ ಮತ್ತು 'ಮೇನೆ'ಯಲ್ಲಿ ಪೂಜ್ಯ ಶ್ರೀಗಳವರು ಹಾಗೂ ಶ್ರೀಗಳವರ ಪಾದುಕೆಗಳು, ಬಿರುದು, ಬಾವಲಿಗಳು, ಛತ್ರಿ, ಖಡ್ಗ, ಗುರಾಣಿ ಹಾಗೂ ಇತರೆ ಆಯುಧಗಳೊಂದಿಗೆ ಮೆರವಣಿಗೆ ಮೂಲಕ ತೆರಳಿ ಜನಮಂಗಳ ಕಲಶದ ಬಳಿಯಿರುವ ಶಮಿ ವೃಕ್ಷ (ಬನ್ನಿವೃಕ್ಷ) ಪೂಜೆ ನೆರವೇರಿತು. ಕಾರ್ಯಕ್ರಮದಲ್ಲಿ ನೂರಾರು ಧರ್ಮಬಂಧುಗಳು ಪಾಲ್ಗೊಂಡಿದ್ದರು.

## ಆಯುಧಪೂಜೆ ಪ್ರಯುಕ್ತ ಶ್ರೀಕ್ಷೇತ್ರ ಶ್ರವಣಬೆಳಗೊಳದ ವಾಹನಗಳಿಗೆ ಪೂಜೆ



ಶ್ರವಣಬೆಳಗೊಳ, ಅ 23 : ಆಯುಧಪೂಜೆ ಪ್ರಯುಕ್ತ ಶ್ರೀಕ್ಷೇತ್ರ ಶ್ರವಣಬೆಳಗೊಳ ಜೈನ ಮಠದ ಪೀಠಾಧ್ಯಕ್ಷರಾದ ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳವರ ನೇತೃತ್ವದಲ್ಲಿ ಗೊಮ್ಮಟನಗರದ ಬಾಹುಬಲಿ ಕಾಲೇಜು ಆವರಣದಲ್ಲಿ ವಾಹನಗಳಿಗೆ ಪೂಜೆ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಚಾಲಕರು ಹಾಗೂ ವಿದ್ಯುತ್ ತಂತ್ರಜ್ಞರಿಗೆ ಉಡುಗೊರೆ ನೀಡಿ ಗೌರವಿಸಿದರು. ನಂತರ ಶ್ರೀಮಠಕ್ಕೆ ಸೇರಿದ 35 ವಾಹನಗಳನ್ನು ಶ್ರವಣಬೆಳಗೊಳ ಹಾಗೂ ವಿಂಧ್ಯಗಿರಿ ಸುತ್ತ ಪ್ರದಕ್ಷಿಣೆಯೊಂದಿಗೆ ಶ್ರೀಮಠದವರೆಗೆ ಮೆರವಣಿಗೆ ಮಾಡಲಾಯಿತು.

## ಚಾರುಶ್ರೀ ವಾಣಿ



ಶರೀರವನ್ನು, ಬಾಹ್ಯರೂಪವನ್ನು, ಆಕಾರವನ್ನು, ವೇಷಭೂಷಣವನ್ನು, ಅಧಿಕಾರ, ಪದವಿಗಳನ್ನು ನೋಡದೇ ವ್ಯಕ್ತಿಯಲ್ಲಿರುವ ಆತ್ಮನನ್ನು ನೋಡು ಎನ್ನುವುದೇ ಧರ್ಮದ ಸಂದೇಶವಾಗಿದೆ. ಧರ್ಮ ಬಾಹ್ಯದಲ್ಲಿಲ್ಲ, ಅಂತರಂಗದಲ್ಲಿದೆ.

– ಪ.ಪೂ. ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರು

## ಅಭಿನವ ಚಾರುಶ್ರೀ ನುಡಿ



### ತಮವ ತೊಲಗಿಸಿ, ಮನವ ಬೆಳಗಿಸಿ

ಮಾನವ ಜನ್ಮವೇ ದುರ್ಲಭ ಆದರೆ ಯಾವುದೋ ಪುಣ್ಯದಿಂದ ಈ ಜನ್ಮದಲ್ಲಿ ಹುಟ್ಟುವ ಅವಕಾಶ ಸಿಕ್ಕ ನಾವುಗಳು, ಸಿಕ್ಕ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕಾದ್ದು ನಮ್ಮ ಕರ್ತವ್ಯವೇ ಆಗಿದೆ. ಆದರೆ ಈ ಮಧ್ಯೆ ಯಾವುದೇ ಕಲುಷಿತ ಪರಿಸರದಲ್ಲಿ ಸಿಲುಕಿ ನಮ್ಮ ಕರ್ತವ್ಯವನ್ನೇ ಮರೆತು ವ್ಯವಹಾರದಲ್ಲಿ ಮಗ್ನರಾಗಿ ನಿಶ್ಚಯ ಮಾರ್ಗದಲ್ಲಿ ಹೋಗದೇ ಅಜ್ಞಾನದ ಅಂಧಕಾರದಲ್ಲಿ ಮುಳುಗುತ್ತೇವೆ. ಇದರಿಂದಾಗಿ ನಾವು ಉತ್ತಮ ಗತಿಯನ್ನು ಪಡೆಯುವಲ್ಲಿ ವಿಫಲರಾಗುತ್ತೇವೆ. ಆತ್ಮ ಕಲ್ಯಾಣದ ಮಾರ್ಗವನ್ನು ಸಾಧಿಸುವಲ್ಲಿ ಹಿಂದೆ ಬೀಳುತ್ತೇವೆ. ಅಂತಹ ಸಂದರ್ಭಗಳಲ್ಲಿ ಮಹಾತ್ಮರು ಆದರ್ಶಗಳನ್ನು ನೆನೆದು ಆತ್ಮನಲ್ಲಿ ತತ್ಪರನಾಗುವಂತೆ ಮಾಡುವಲ್ಲಿ ಪರ್ವಗಳು ಒಂದು ಉತ್ತಮ ಆಧ್ಯಾತ್ಮಿಕ ನೆಲೆಯನ್ನು ಒದಗಿಸುತ್ತವೆ. ಅಂತಹ ಪರ್ವಗಳಲ್ಲಿ ಮಹತ್ವವಾದದ್ದೇ! ದೀಪಾವಳಿ. ಜ್ಞಾನಿಗಳು ಈ ಪರ್ವವನ್ನು ಆಧ್ಯಾತ್ಮಿಕ ಪರ್ವವೆಂದೇ ಆಚರಿಸಬೇಕು ಎಂದು ಆಗಮಗಳು ಸಾರವಾಗಿದೆ.

ಕೋಟಿ–ಕೋಟಿ ಮಾನವರ ಮನದಲ್ಲಿ ಆಧ್ಯಾತ್ಮದ ಜ್ಞಾನ ಜ್ಯೋತಿಯನ್ನು ಬೆಳಗಿಸುವ ಪರ್ವ ದೀಪಾವಳಿಯಾಗಿದೆ. ತೀರ್ಥಂಕರರ ಪರಂಪರೆಯಲ್ಲಿ ಅಂತಿಮ ತೀರ್ಥಂಕರರಾದ ಭಗವಾನ್ ಮಹಾವೀರರು ಜಗತ್ತಿಗೆ ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ, ಅಪರಿಗ್ರಹಗಳೆಂಬ ಮಹತ್ವದ ಆಚರಣೆಯ ಜ್ಞಾನ ಬಿತ್ತಿ ಒಳ್ಳೆಯ ನಂಬಿಕೆ. ಒಳ್ಳೆಯ ಜ್ಞಾನ ಒಳ್ಳೆಯ ಆಚರಣೆಯಿಂದ ಮೋಕ್ಷ ಸಂಪದ ನಮ್ಮದಾಗುವುದು ಎಂದು ತಿಳಿಸಿ. ಜನರ ಹೃದಯದಲ್ಲಿದ್ದ ಅಜ್ಞಾನವೆಂಬ ಕತ್ತಲನ್ನು ತೊಲಗಿಸಿ ಸುಜ್ಞಾನ ದೀವಿಗೆಯನ್ನು ಬೆಳಗಿದ ದಿನ ಹಾಗೂ ಅವರು ಅಂದು ಮೋಕ್ಷವನ್ನು ಸಿದ್ಧಿಸಿಕೊಂಡ ಮಹತ್ವ ದಿನ ಹಾಗಾಗಿ ದೀಪಾವಳಿಯು ಜೈನರಿಗೆ ಜ್ಞಾನ ದೀವಿಗೆಯನ್ನು ಬೆಳಗುವ ದಿನ.

ಕೇವಲ ಸಾಲು ಸಾಲಾಗಿ ದೀಪಗಳನ್ನು ಬೆಳಗಿದರೆ ಸಾಲದು, ಜ್ಞಾನವೆಂಬ ಬೆಳಕನ್ನು ಪ್ರತಿಯೊಂದು ಹೃದಯದಲ್ಲಿ ಹಚ್ಚಬೇಕು. ಮನವನ್ನು ಕತ್ತಲೆಗೊಳಿಸಿ ತನುವನ್ನು ಬೆಳಗುವುದರಿಂದ ಫಲವಿಲ್ಲ, ಕಲುಷಿತವಾದ ಅಂತರಂಗವನ್ನು ಸ್ವಚ್ಛಗೊಳಿಸಿ ಹಿಂಸೆಯಿಂದ ಅಹಿಂಸೆಯಡೆಗೆ, ಅಸತ್ಯದಿಂದ ಸತ್ಯದೆಡೆಗೆ, ಲೋಭದಿಂದ ಉದಾರತೆ ಕಡೆಗೆ, ದುರಾಚಾರದಿಂದ ಸದಾಚಾರದ ಕಡೆಗೆ ಮನಸ್ಸು ಕೊಂಡೊಯ್ಯಬೇಕು. ತನ್ನ ಸುಖಕ್ಕಾಗಿ ಸ್ವಾರ್ಥದಿಂದ ನಡೆಯುವ ಅಜ್ಞಾನ ವ್ಯವಹಾರಗಳನ್ನು ಬಿಟ್ಟು ಮಹಾವೀರರ ಅಮರ ಸಂದೇಶವಾದ "ಬದುಕು, ಬದುಕಲು ಬಿಡು" ಎಂಬ ತತ್ವದಂತೆ ನಡೆದು ಎಲ್ಲರಲ್ಲೂ ಅಂತರಂಗ ಜ್ಯೋತಿಯನ್ನು ಬೆಳಗಬೇಕು ಆಗಮಾತ್ರ ಮಾನವ ಜನ್ಮ ಸಾರ್ಥಕತೆಯನ್ನು ಕಾಣುತ್ತದೆ. ಪರ್ವಗಳಿಗೆ ಒಂದು ದಿವ್ಯಾರ್ಥ ಸಿಗುತ್ತದೆ. ಮುಂದೆ ಬರುವ ದೀಪಾವಳಿಯ ಪರ್ವ ತನು ಬೆಳಗುವ ಪರ್ವವಾಗದೇ ಮನ ಬೆಳಗುವ ಪರ್ವವಾಗಲಿ.

– ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳವರು


## ಬೇಕಾಗಿದ್ದಾರೆ

ಪಿ.ಯು.ಸಿ. ಅಥವಾ ಪದವಿ ಪಾಸಾಗಿರುವ ಯುವಕರು ಕಛೇರಿ ಕೆಲಸಕ್ಕೆ ಬೇಕಾಗಿದ್ದಾರೆ
ಆಸಕ್ತರು ಸಂಪರ್ಕಿಸಬಹುದು.
ಮುಖ್ಯ ಕಾರ್ಯದರ್ಶಿ, ಎಸ್.ಡಿ.ಜೆ.ಎಂ.ಐ.ಎಂ.ಸಿ.
(ರಿ) ಶ್ರೀಕ್ಷೇತ್ರ ಶ್ರವಣಬೆಳಗೊಳ
ಮೊ : 84315 60480


## ಶ್ರೀಮಠದ ವತಿಯಿಂದ ಪೊಲೀಸ್ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಯವರಿಗೆ ಅಭಿನಂದನೆ



**ಶ್ರವಣಬೆಳಗೊಳ, ಅ. 23 :** ಆಯುಧ ಪೂಜೆ ಅಂಗವಾಗಿ ಶ್ರವಣಬೆಳಗೊಳದ ಶ್ರೀಜೈನ ಮಠದಲ್ಲಿ ಹಾಸನ ಜಿಲ್ಲೆಯ ಪೊಲೀಸ್ ಇಲಾಖೆ ಅಧಿಕಾರಿಗಳು ಹಾಗೂ ಶ್ರವಣಬೆಳಗೊಳ ಪೊಲೀಸ್ ಠಾಣೆಯ ಸಿಬ್ಬಂದಿಗಳಿಗೆ ಅಭಿನಂದನಾಪೂರ್ವಕ ಆಶೀರ್ವಾದ ಕಾರ್ಯಕ್ರಮ ನೆರವೇರಿತು. ಈ ಸಂದರ್ಭದಲ್ಲಿ ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳವರು ಆಶೀರ್ವಚನ ನೀಡಿದರು. ನಮ್ಮ ದೀಕ್ಷಾ ಗುರುಗಳಾದ ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳವರು 2005 ರಿಂದ ಪ್ರತಿ ವರ್ಷ ಅಭಿನಂದಿಸಿ, ಗೌರವಿಸುತ್ತಿದ್ದರು. ಆ ಪರಂಪರೆಯನ್ನು ನಾವು ಮುಂದುವರಿಸುತ್ತಿದ್ದೇವೆ ಎಂದು ಹೇಳಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಹಮದ್ ಸುಜೀತಾ ಮಾತನಾಡಿ, ದೇಶ, ವಿದೇಶಗಳಿಂದ ಇಲ್ಲಿಗೆ ಸಾವಿರಾರು ಜನ ದಿನನಿತ್ಯ ಆಗಮಿಸುತ್ತಾರೆ. ಶಾಂತಿ ಸುವ್ಯವಸ್ಥೆ ಕಾಪಾಡುವುದು, ಅವರ ಸುರಕ್ಷತೆ ಹಾಗೂ ಸೂಕ್ತ ಭದ್ರತೆ ಒದಗಿಸುವುದು ನಮ್ಮ ಕರ್ತವ್ಯವಾಗಿದ್ದು, ನಮ್ಮ ಇಲಾಖೆ ವತಿಯಿಂದ ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಡಿವೈಎಸ್ಪಿ ರವಿಪ್ರಸಾದ್, ಸಿಪಿಐ ಸಂತೋಷ್, ಶ್ರವಣಬೆಳಗೊಳ ಠಾಣೆ ಪಿಎಸ್ಐ ಶಿವಶಂಕರ್, ವೈದ್ಯಾಧಿಕಾರಿ ಡಾ. ಬಿ.ಆರ್.ಯುವರಾಜ್ ಹಾಗೂ ಪೊಲೀಸ್ ಸಿಬ್ಬಂದಿ ಉಪಸ್ಥಿತರಿದ್ದರು.

# ಶ್ರೀಕ್ಷೇತ್ರ ಶ್ರವಣಬೆಳಗೊಳದಲ್ಲಿ ಶರನ್ನವರಾತ್ರಿ ವಿಶೇಷ ಪೂಜಾ ಕಾರ್ಯಕ್ರಮಗಳು

## ಶ್ರೀ ಆಮ್ರ ಕೂಷ್ಮಾಂಡಿನಿ ದೇವಿ ವಿಶೇಷ ಅಲಂಕಾರ


ಮೊದಲನೇ ದಿನ


ಎರಡನೇ ದಿನ


ಮೂರನೇ ದಿನ


ನಾಲ್ಕನೇ ದಿನ


ಐದನೇ ದಿನ


ಆರನೇ ದಿನ


ಏಳನೇ ದಿನ


ಎಂಟನೇ ದಿನ


ಒಂಭತ್ತನೇ ದಿನ


ವಿಜಯದಶಮಿ

## ಶ್ರೀ ಸರಸ್ವತಿ ಅಮ್ಮನವರ ವಿಶೇಷ ಅಲಂಕಾರ


ಮೊದಲನೇ ದಿನ


ಎರಡನೇ ದಿನ


ಮೂರನೇ ದಿನ


ನಾಲ್ಕನೇ ದಿನ


ಐದನೇ ದಿನ


ಆರನೇ ದಿನ


ಏಳನೇ ದಿನ


ಎಂಟನೇ ದಿನ


ಒಂಭತ್ತನೇ ದಿನ


ವಿಜಯದಶಮಿ

## ಕಾರ್ಕಳ ಶ್ರೀಗಳವರಿಗೆ ಸ್ವಾಗತ



ಶ್ರವಣಬೆಳಗೊಳ, ಅ.22: ಕಾರ್ಕಳ ಜೈನಮಠದ ಪ.ಪೂ. ರಾಜಗುರು ಧ್ಯಾನಯೋಗಿ ಸ್ವಸ್ತಿಶ್ರೀ ಲಲಿತಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮಿಗಳವರು ಶ್ರೀಕ್ಷೇತ್ರ ಶ್ರವಣಬೆಳಗೊಳಕ್ಕೆ ಆಗಮಿಸಿದರು. ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳವರ ನೇತೃತ್ವದಲ್ಲಿ ಶ್ರೀಗಳವರನ್ನು ಪೂರ್ಣಕುಂಭ, ಮಂಗಲವಾದ್ಯಗಳೊಂದಿಗೆ ಕ್ಷೇತ್ರಕ್ಕೆ ಸ್ವಾಗತಿಸಲಾಯಿತು.

## ಶ್ರೀಕ್ಷೇತ್ರ ಶ್ರವಣಬೆಳಗೊಳದಲ್ಲಿ ಭಟ್ಟಾರಕ ಶ್ರೀಗಳವರ ಅಪೂರ್ವ ಸಂಗಮ





ಶ್ರವಣಬೆಳಗೊಳ, ಅ.22: ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳವರ ನೇತೃತ್ವದಲ್ಲಿ ಶ್ರೀಕ್ಷೇತ್ರದಲ್ಲಿ ಜರುಗಿದ ಶರನ್ನವರಾತ್ರಿ ಮಹೋತ್ಸವದಲ್ಲಿ ಕಾರ್ಕಳ ಜೈನಮಠದ ಪ.ಪೂ. ರಾಜಗುರು ಧ್ಯಾನಯೋಗಿ ಸ್ವಸ್ತಿಶ್ರೀ ಲಲಿತಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮಿಗಳವರು, ಕಂಬದಹಳ್ಳಿ ಜೈನಮಠದ ಪ.ಪೂ. ಸ್ವಸ್ತಿಶ್ರೀ ಭಾನುಕೀರ್ತಿ ಭಟ್ಟಾರಕ ಸ್ವಾಮಿಗಳವರು ಹಾಗೂ ಕನಕಗಿರಿ ಜೈನ ಮಠದ ಪ.ಪೂ. ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮಿಗಳವರು ಉಪಸ್ಥಿತರಿದ್ದು, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಾನ್ನಿಧ್ಯ ವಹಿಸಿದ್ದರು. ಈ ಸಂದರ್ಭದಲ್ಲಿ 2024ರ ಜನವರಿಯಲ್ಲಿ ಜರುಗಲಿರುವ ಕಾರ್ಕಳ ತಾಲೂಕಿನ ಆನೆಕೆರೆ ಚತುರ್ಮುಖ ಕೆರೆ ಬಸದಿಯ ಧಾಮಸಂಪ್ರೋಕ್ಷಣೆ ಹಾಗೂ ಪಂಚಕಲ್ಯಾಣ ಪೂರ್ವಕ ಜಿನಬಿಂಬಗಳ ಪುನರ್‌ಪ್ರತಿಷ್ಠಾ ಮಹೋತ್ಸವಕ್ಕೆ ಕಾರ್ಕಳ ಶ್ರೀಗಳವರು ಎಲ್ಲಾ ಭಟ್ಟಾರಕರಿಗೆ ಆಹ್ವಾನ ನೀಡಿದರು.

## ಶ್ರೀಕ್ಷೇತ್ರ ಶ್ರವಣಬೆಳಗೊಳದಲ್ಲಿ ಶರನ್ನವರಾತ್ರಿ ಪ್ರಯುಕ್ತ ನವದೇವತೆಗಳ ವಿಶೇಷ ಅಲಂಕಾರ ಮತ್ತು ಅಷ್ಟಾವಧಾನ ಸಹಿತ ವಿಶೇಷ ಪೂಜಾ ಕಾರ್ಯಕ್ರಮಗಳು



ಶ್ರವಣಬೆಳಗೊಳ : ಶ್ರೀಕ್ಷೇತ್ರದಲ್ಲಿ ಶರನ್ನವರಾತ್ರಿ ಪ್ರಯುಕ್ತ ಅಕ್ಟೋಬರ್ 15 ರಿಂದ 24ರವರೆಗೆ ನವದೇವತೆಗಳ ವಿಶೇಷ ಅಲಂಕಾರ ಮತ್ತು ಅಷ್ಟಾವಧಾನ ಸಹಿತ ಪೂಜಾ ಕಾರ್ಯಕ್ರಮಗಳು ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳವರ ನೇತೃತ್ವದಲ್ಲಿ ನೇರವೇರಿತು.

## ಜೈನ ಮುನಿಗಳು ಹಾಗೂ ಆರ್ಯಿಕೆಯರ ವಿಹಾರದ ಸಂದರ್ಭದಲ್ಲಿ ಭದ್ರತೆಗೆ ಸರ್ಕಾರದ ಕ್ರಮ

ಬೆಂಗಳೂರು : ದಿಗಂಬರ ಮತ್ತು ಶ್ವೇತಾಂಬರ ಜೈನ ಸಾಧುಗಳು ಹಾಗೂ ಸಾಧ್ವಿಗಳು ವಿಹಾರ ಮಾಡುವ ಸಮಯದಲ್ಲಿ ಸೂಕ್ತ ಪೊಲೀಸ್ ಭದ್ರತೆ ಒದಗಿಸುವಂತೆ ಕರ್ನಾಟಕ ಸರ್ಕಾರದ ಒಳಾಡಳಿತ (ಕಾನೂನು ಮತ್ತು ಸುವ್ಯವಸ್ಥೆ) ಇಲಾಖೆಯ ಅಧೀನ ಕಾರ್ಯದರ್ಶಿಯವರು ಆರಕ್ಷಕ ಮಹಾನಿರ್ದೇಶಕರಿಗೆ ಆದೇಶಿಸಿ ಸೂಚಿಸಿರುತ್ತಾರೆ.

ಕರ್ನಾಟಕ ಸರ್ಕಾರ

ಸಂಖ್ಯೆ: ಹೆಚ್‌ಡಿ 23 ಪಿಸಿಇ 2023

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 20.07.2023.

**ಇವರಿಂದ:**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಒಳಾಡಳಿತ ಇಲಾಖೆ,
ವಿಧಾನ ಸೌಧ, ಬೆಂಗಳೂರು.

"ಜರೂರು"

**ಇವರಿಗೆ:**
ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು,
ನೃಪತುಂಗ ರಸ್ತೆ,
ಬೆಂಗಳೂರು.

**ಮಾನ್ಯರೇ,**

**ವಿಷಯ:** ದಿಗಂಬರ ಮತ್ತು ಶ್ವೇತಾಂಬರ ಜೈನ ಸಾಧುಗಳು ಮತ್ತು ಸಾಧ್ವಿಗಳ ಭದ್ರತೆ ಕುರಿತು.

**ಉಲ್ಲೇಖ:** 1. ಶ್ರೀ ಆದಿ ಜೇನ್ ಇವರ ಇ-ಮೇಲ್ ಪತ್ರ/ಮನವಿ ದಿನಾಂಕ: 12.07.2023.
2. ಶ್ರೀ ಅಂಕುರ್ ಜೇನ್, ಸಲಹಾ ಸದಸ್ಯ, ಸಮುದಾಯದ ಮುಖಂಡರು, ಅಲ್ಪಸಂಖ್ಯಾತರ ರಾಷ್ಟ್ರೀಯ ಆಯೋಗ ಇವರ ಮನವಿ ದಿನಾಂಕ: 01.07.2023.
3. ಸರ್ಕಾರದ ಅಧೀನ ಕಾರ್ಯದರ್ಶಿ, ಅಲ್ಪಸಂಖ್ಯಾತರ ಇಲಾಖೆ ಇವರ ಅ.ಟಿ ಸಂಖ್ಯೆ: MWD 261 MDS 2023, ದಿನಾಂಕ: 18.07.2023.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳ ಪ್ರತಿ ಹಾಗೂ ಅಡಕವನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ಪತ್ರಗಳಲ್ಲಿ ದಿಗಂಬರ ಮತ್ತು ಶ್ವೇತಾಂಬರ ಜೈನ ಸಾಧುಗಳು ಮತ್ತು ಸಾಧ್ವಿಗಳು, ರಾಜ್ಯದ ಗಡಿ ಭಾಗದಲ್ಲಿ, ಪಾದಯಾತ್ರೆ ಸಮಯದಲ್ಲಿ, ಹಾಗೂ ಇತರೆ ಸಂದರ್ಭದಲ್ಲಿ ರಾಜ್ಯದ ಅತಿಥಿ ಎಂದು ಪರಿಗಣಿಸಿ, ಸೂಕ್ತ ಪೊಲೀಸ್ ಭದ್ರತೆಯನ್ನು ಒದಗಿಸುವಂತೆ ಕೋರಿರುತ್ತಾರೆ.

ಆದುದರಿಂದ, ಶ್ರೀ ಆದಿ ಜೇನ್ ಹಾಗೂ ಶ್ರೀ ಅಂಕುರ್ ಜೇನ್, ಸಲಹಾ ಸದಸ್ಯ, ಸಮುದಾಯದ ಮುಖಂಡರು, ಅಲ್ಪಸಂಖ್ಯಾತರ ರಾಷ್ಟ್ರೀಯ ಆಯೋಗ ಇವರ ಕೋರಿಕೆಯನ್ನು ಪರಿಶೀಲಿಸಿ, ನಿಯಮಾನುಸಾರ ಅಗತ್ಯ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ಮನವಿದಾರಿಗೆ ಹಿಂಬರಹ ನೀಡುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,
(ರಾಜಶೇಖರ ಎಂ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಕಾನೂನು ಮತ್ತು ಸುವ್ಯವಸ್ಥೆ)
080-2203 3254, e-mail:uslo-home@karnataka.gov.in

## ಎನ್ವೆರಾ ಹೆಲ್ತ್ ಸಂಸ್ಥೆಯನ್ನು ಖರೀದಿಸಿದ ಜೈನ ಉದ್ಯಮಿಗಳು





ಚೆನ್ನೈ : ಅಖಿಲ ಭಾರತೀಯ ದಿಗಂಬರ ಜೈನ ಮಹಿಳಾ ಮಹಾಸಭಾದ ಅಧ್ಯಕ್ಷರಾದ ಶ್ರೀಮತಿ ಸರಿತಾ ಮಹೇಂದ್ರಕುಮಾರ್ ಜೈನ್‌ರವರ ಪುತ್ರರಾದ ಅನುರಾಗ್ ಜೈನ್ ಮತ್ತು ವರ್ಧಮಾನ್ ಜೈನ್ ಒಡೆತನದ, ಆರೋಗ್ಯ ಸೇವೆಗಳಲ್ಲಿ ಜಾಗತಿಕ ಮುಂಚೂಣಿಯಲ್ಲಿರುವ ಆಕ್ಸೆಸ್ ಹೆಲ್ತ್‌ಕೇರ್ ಸಂಸ್ಥೆಯು ಎನ್ವೆರಾ ಹೆಲ್ತ್ ಸಂಸ್ಥೆಯನ್ನು 263 ಕೋಟಿ ರೂಗಳಿಗೆ ಖರೀದಿಸಿದೆ. ಇದರಿಂದ ರೋಗಿಗಳಿಗೆ ಉತ್ತಮ ಆರೋಗ್ಯ ಸೇವೆಯನ್ನು ಒದಗಿಸಲು ಮತ್ತಷ್ಟು ಅನುಕೂಲವಾಗಲಿದೆ ಎಂದು ಆಕ್ಸೆಸ್ ಹೆಲ್ತ್‌ಕೇರ್‌ನ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅನುರಾಗ್ ಜೈನ್ ಹೇಳಿರುತ್ತಾರೆ.

## ತ್ಯಾಗಿಭವನ ಕಟ್ಟಡಕ್ಕೆ ಬಣ್ಣದ ದಾನಿಗಳು

CENTURY ULTRA PAINTS

ಶ್ರವಣಬೆಳಗೊಳ : ಶ್ರೀಕ್ಷೇತ್ರದ ತ್ಯಾಗಿಭವನ ('ಸಿ' ಬ್ಲಾಕ್) ಕಟ್ಟಡಕ್ಕೆ ಜಮಖಂಡಿ ತಾಲೂಕು ಅಲಗೂರಿನ ಶ್ರೀ ಶೀತಲ್ ಶ್ರೀಮಂತ ಮುತ್ತೂರರವರು ಸಂಪೂರ್ಣ ಬಣ್ಣ ಹಚ್ಚುವ ಕಾರ್ಯವನ್ನು ಮಾಡಿಸಿಕೊಟ್ಟಿರುತ್ತಾರೆ. ಪರಮಪೂಜ್ಯ ಚಾರುಶ್ರೀಗಳವರು ಶ್ರೀಯುತರ ದಾನ ಮನೋಭಾವವನ್ನು ಶ್ಲಾಘಿಸಿ ಆಶೀರ್ವಾದ ನೀಡಿರುತ್ತಾರೆ.

## ಹಸ್ತಪ್ರತಿಗಳ ಕೊಡುಗೆ

ಶ್ರವಣಬೆಳಗೊಳ, ಅ. 7 : ಕೇರಳದ ವೈನಾಡು ಜಿಲ್ಲೆ ಮಾನಂದ ಮೂಟ್ಲಿಯ ಸ್ನೇಹಲತಾ ಎಸ್. ಇವರು ಹಸ್ತಪ್ರತಿ ಸಂರಕ್ಷಣೆಗೆ ಆಸಕ್ತಿ ವಹಿಸಿ ಬಾಹುಬಲಿ ವಿರಚಿತ 'ನಾಗಕುಮಾರ ಚರಿತೆ', 'ಜ್ಯೋತಿಷ್ಯ' ಹಾಗೂ 'ಚತುರ್ವಿಂಶತಿ ತೀರ್ಥಂಕರರ ವಿಧಾನ' ಈ ಮೂರು ತಾಡೋಲೆ ಹಸ್ತಪ್ರತಿಗಳನ್ನು ಶ್ರೀಕ್ಷೇತ್ರ ಶ್ರವಣಬೆಳಗೊಳದ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆಯ ಆಗಮದರ್ಶನ ಗ್ರಂಥಭಂಡಾರಕ್ಕೆ ನೀಡಿರುತ್ತಾರೆ.

## ಧರ್ಮ ಬಂಧುಗಳಲ್ಲಿ ವಿನಂತಿ

ಶ್ರೀ ಶ್ರವಣಬೆಳಗೊಳ ದಿಗಂಬರ ಜೈನ ಜ್ಞಾನ ಪ್ರಸಾರಕ ಸಂಘ(ರಿ.) ದ ವತಿಯಿಂದ ಶ್ರವಣಬೆಳಗೊಳ ಮತ್ತು ಸುತ್ತಮುತ್ತಲಿನ ಗ್ರಾಮೀಣ ಪ್ರದೇಶದ ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವ ಸದುದ್ದೇಶದಿಂದ ಕೆಳಕಂಡ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ನಡೆಸಲಾಗುತ್ತಿದೆ. 2000 ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ನಮ್ಮ ವಿದ್ಯಾಸಂಸ್ಥೆಯಲ್ಲಿ ಅಧ್ಯಯನ ಮಾಡುತ್ತಿದ್ದಾರೆ.

ಪರಮಪೂಜ್ಯ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ಕೃಪಾಶೀರ್ವಾದದಿಂದ ನಡೆಸಲ್ಪಡುತ್ತಿರುವ ಶ್ರೀ ಶ್ರವಣಬೆಳಗೊಳ ದಿಗಂಬರ ಜೈನ ಜ್ಞಾನ ಪ್ರಸಾರಕ ಸಂಘ (ರಿ.) ದ ಶೈಕ್ಷಣಿಕ ಶ್ರೇಯೋಭಿವೃದ್ಧಿಗಾಗಿ ದಿಗಂಬರ ಜೈನ ಧರ್ಮೀಯರು ನಮ್ಮ ಶಿಕ್ಷಣಸಂಸ್ಥೆಗೆ ಶಿರೋಮಣಿ ಸಂರಕ್ಷಕ, ಪರಮ ಸಂರಕ್ಷಕ ಮತ್ತು ಸಂರಕ್ಷಕರ ಗೌರವಾನ್ವಿತ ಪದವಿಯನ್ನು ಪಡೆಯಬಯಸುವವರು ಶಿಕ್ಷಣ ಸಂಸ್ಥೆಗಳ ಪ್ರಗತಿಗಾಗಿ, ಸಂಸ್ಥೆಯ ಕಟ್ಟಡಗಳನ್ನು ನಿರ್ಮಿಸಲು ಹಾಗೂ ಗ್ರಾಮೀಣ ಪ್ರತಿಭಾವಂತ ಮಕ್ಕಳಿಗೆ ವಿದ್ಯಾರ್ಥಿವೇತನ ನೀಡಬಯಸುವವರು ಈ ಕೆಳಕಂಡ ವಿವರದಂತೆ ದಾನ ನೀಡಿ ಪುಣ್ಯಕಾರ್ಯದಲ್ಲಿ ಭಾಗಿಯಾಗಬಹುದು.

| | | |
|---|---|---|
| ಶಿರೋಮಣಿ ಸಂರಕ್ಷಕರು | ರೂ. | 11,00,000–00 |
| ಪರಮ ಸಂರಕ್ಷಕರು | ರೂ. | 5,00,000–00 |
| ಸಂರಕ್ಷಕರು | ರೂ. | 3,00,000–00 |

### ಎಸ್‌ಎಸ್‌ಡಿಜೆಜೆಪಿ ಸಂಘದ ವತಿಯಿಂದ ನಡೆಯುತ್ತಿರುವ ಶಿಕ್ಷಣ ಸಂಸ್ಥೆಗಳು

ಶ್ರೀ ಅಂಬಿಕಾ ಹಿರಿಯ ಪ್ರಾಥಮಿಕ ಶಾಲೆ
ಶ್ರೀಮತಿ ಎಸ್.ಎನ್. ಕನ್ನಡ ಮಾಧ್ಯಮ ಪ್ರೌಢಶಾಲೆ
ಶ್ರೀ ಅಂಬಿಕಾ ಆಂಗ್ಲ ಮಾಧ್ಯಮ ಪ್ರೌಢಶಾಲೆ
ಶ್ರೀಮತಿ ಎಸ್.ಎನ್. ಪದವಿಪೂರ್ವ ಕಾಲೇಜು
ಶ್ರೀ ಬಾಹುಬಲಿ ಪಾಲಿಟೆಕ್ನಿಕ್
ಶ್ರೀ ಬಾಹುಬಲಿ ಇಂಜಿನಿಯರಿಂಗ್ ಕಾಲೇಜು
ಶ್ರೀ ಬಾಹುಬಲಿ ಸ್ಕೂಲ್ ಆಫ್ ನರ್ಸಿಂಗ್
ಬಿ.ಸಿ.ಇ. ವಿದ್ಯಾರ್ಥಿ/ವಿದ್ಯಾರ್ಥಿನಿ ನಿಲಯ
ಎಸ್.ಬಿ.ಪಿ. ವಿದ್ಯಾರ್ಥಿ/ವಿದ್ಯಾರ್ಥಿನಿ ನಿಲಯ
ನರ್ಸಿಂಗ್ ವಿದ್ಯಾರ್ಥಿ/ವಿದ್ಯಾರ್ಥಿನಿ ನಿಲಯ

: ದಾನ ನೀಡಬಯಸುವವರು ಸಂಪರ್ಕಿಸಿ :

| | |
|---|---|
| 1.Name of A/C | : S.S.D.J.J.P.SANGHA(R.)SCHOLARSHIP FUND |
| 2.A/C Number | : 520101228383761 |
| 3.IFSC CODE | : UBIN0900729 |
| 4.Bank Name | : UNION BANK OF INDIA |
| 5.Branch | : SHRAVANABELAGOLA |
| 6.Email Address | : secretarysangha1982@gmail.com |
| 7.Mobile No | : 7996448066 |

Union Bank of India
SSDJJP SANGHA R SCHOLARSHIP FUND AC
BHIM UPI

## ಕೆಜೆಎ–ಚಾರುಶ್ರೀ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು : ಕೆಜೆಎ–ಚಾರುಶ್ರೀ ವಿದ್ಯಾರ್ಥಿವೇತನ ನಿಧಿಯಿಂದ ಸಾಲರೂಪದ ವಿದ್ಯಾರ್ಥಿವೇತನವನ್ನು 2023–24ನೇ ಸಾಲಿನಲ್ಲಿ ಪಿ.ಯು.ಸಿ. ನಂತರದ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ಹಾಗೂ ಆರ್ಥಿಕವಾಗಿ ಹಿಂದುಳಿದ ದಿಗಂಬರ ಜೈನ ವಿದ್ಯಾರ್ಥಿಗಳಿಗೆ ನೀಡಲು ತೀರ್ಮಾನಿಸಿದೆ. ವಿದ್ಯಾರ್ಥಿವೇತನ ಪಡೆಯಲು ಅಪೇಕ್ಷಿಸುವ ವಿದ್ಯಾರ್ಥಿಗಳು ಕರ್ನಾಟಕ ಜೈನ ಅಸೋಸಿಯೇಷನ್ನಿನ ವೆಬ್‌ಸೈಟ್ https://www.karnatakajainassociation.com/scholarships/download ಇಲ್ಲಿ ಅರ್ಜಿ ಫಾರ್ಮ್ ಡೌನ್‌ಲೋಡ್ ಮಾಡಿ ಭರ್ತಿಮಾಡಿದ ಅರ್ಜಿಯನ್ನು ದಿನಾಂಕ 30.12.2023ರ ಒಳಗಾಗಿ ಅಂಚೆ ಅಥವಾ ಕೋರಿಯರ್ ಮೂಲಕ ಕರ್ನಾಟಕ ಜೈನ ಅಸೋಸಿಯೇಷನ್ನಿನ ವಿಳಾಸಕ್ಕೆ ಕಳುಹಿಸಿಕೊಡುವುದು.

## ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

2023–24ನೇ ಸಾಲಿನಲ್ಲಿ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ. ಹಾಗೂ IIT, IIIT, NIT, IIM, IISER, AIIMS, NLU, INI & IUSLA ಗಳಂತಹ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಪ್ರವೇಶ ಪಡೆದಿರುವ ಕರ್ನಾಟಕದ ಜೈನ ವಿದ್ಯಾರ್ಥಿಗಳಿಗೆ ಕೋರ್ಸಿನ ಪೂರ್ಣ ಅವಧಿಯಲ್ಲಿ ಒಂದು ಬಾರಿಗೆ ಪ್ರೋತ್ಸಾಹಧನವನ್ನು ನೀಡಲು ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. https://sevasindhu.karnataka.gov.in/Sevasindhu/DepartmentServices ವೆಬ್‌ಸೈಟ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಕೊನೆಯ ದಿನಾಂಕ : 30–11–2023.

## ವಿಶೇಷ ದಿನಗಳು

**09.11.2023 ಗುರುವಾರ :** ಏಕಾದಶಿ

**11.11.2023 ಶನಿವಾರ :** ತ್ರಯೋದಶಿ

**12.11.2023 ಭಾನುವಾರ :** ನರಕ ಚತುರ್ದಶಿ, ಧನಲಕ್ಷ್ಮಿ ಪೂಜೆ, ಶ್ರೀ ಮಹಾವೀರ ಶಕೆ 2550, ವಿಕ್ರಮಶಕೆ 2080 ಪ್ರಾರಂಭ

**13.11.2023 ಸೋಮವಾರ :** ಭ. ಶ್ರೀ ಮಹಾವೀರ ತೀರ್ಥಂಕರರ ಮೋಕ್ಷ ಕಲ್ಯಾಣ, ಅಮಾವಾಸ್ಯೆ, ದೀಪಾವಳಿ.

**14.11.2023 ಮಂಗಳವಾರ :** ಭ. ಶ್ರೀ ಪುಷ್ಪದಂತ ತೀರ್ಥಂಕರರ ಕೇವಲ ಜ್ಞಾನ ಕಲ್ಯಾಣ, ಬಲಿಪಾಡ್ಯಮಿ,

## ಜೈನ್ ಕ್ವಿಜ್

: ಪ್ರಶ್ನೆಗಳು :

1) ಶ್ರವಣಬೆಳಗೊಳದಲ್ಲಿ ಅಚಿಯಕ್ಕ ಕಟ್ಟಿಸಿರುವ ಬಸದಿ ಯಾವುದು?
2) ಕರ್ನಾಟಕದಲ್ಲಿರುವ ಸಿದ್ಧ ಕ್ಷೇತ್ರ ಯಾವುದು?
3) ಶ್ರವಣಬೆಳಗೊಳದಲ್ಲಿ ಯಾವ ಬಸದಿಯಲ್ಲಿ ಸಿದ್ಧಾಂತ ಶಾಸ್ತ್ರಗಳನ್ನು ಸಂಗ್ರಹಿಸಿಡಲಾಗುತಿತ್ತು?
4) ಚೈತನ್ಯ ಶಕ್ತಿ ಇರುವ ದ್ರವ್ಯ.
5) ಗುಂಪಿಗೆ ಸೇರದ ಪದ ಗುರುತಿಸಿ.
ಎ) ಶಾಂತಿ ಬಿ) ಕುಂಥು ಸಿ) ಅರ ಡಿ) ಮಲ್ಲಿನಾಥ

ಈ ಮೇಲಿನ ಪ್ರಶ್ನೆಗಳಿಗೆ ದಿನಾಂಕ 10–11–2023ರ ಒಳಗೆ ದೂರವಾಣಿ ಸಂಖ್ಯೆ : **8660118443** ಗೆ ವಾಟ್ಸಪ್ ಮೂಲಕ ಸರಿ ಉತ್ತರಗಳನ್ನು ತಮ್ಮ ಹೆಸರು, ವಿಳಾಸದೊಂದಿಗೆ ಕಳುಹಿಸುವುದು.

ಸರಿ ಉತ್ತರ ಕಳುಹಿಸಿದ ಮೊದಲ 5 ಜನರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಹಿಂದಿನ ಸಂಚಿಕೆಯ ಉತ್ತರಗಳು :

1) **14 ಗುಣಸ್ಥಾನಗಳು**
2) ಈರ್ಯಾ, ಭಾಷಾ, ಏಷಣಾ, ಆದಾನನಿಕ್ಷೇಪಣಾ, ವ್ಯುತ್ಸರ್ಗ
3) ಗೃಹತ್ಯಾಗ ಮಾಡಿದ ದಿಗಂಬರ ಜೈನ ಸಾಧುಗಳು
4) ಹನ್ನೊಂದು ಅಂಗಗಳು, ಹದಿನಾಲ್ಕು ಪೂರ್ವಗಳು
5) ಶುಭಚಂದ್ರಾಚಾರ್ಯ

ಮೊದಲು ಸರಿ ಉತ್ತರ ಬರೆದವರು :

1) ಜಿ.ಎಸ್. ನಿರ್ಮಲಮ್ಮ, ಶ್ರವಣಬೆಳಗೊಳ
2) ನಿಶ್ಚಲ ಸನತ್‌ಕುಮಾರ್, ಚಿಕ್ಕಮಗಳೂರು.
3) ಮಾಲಾ ಶ್ರೇಯಸ್, ಮಾಯಸಂದ್ರ
4) ಪದ್ಮಿನಿ ಜ್ವಾಲಕುಮಾರ್, ಬೆಂಗಳೂರು
5) ಗೀತಾ ಆನಂದ್, ಮೈಸೂರು

ಇವರುಗಳಿಗೆ ಶುಭಾಷಯಗಳು

## ಜಿನ ಪದಬಂಧ–04

**ಮೇಲಿನಿಂದ ಕೆಳಕ್ಕೆ :**

1) ಮನಸ್ಸಿನ ಸಂಜ್ಞೆಯಾದ ಇದು 4 ಪ್ರಕಾರದ ದುಃಖಗಳಲ್ಲಿ ಒಂದು (3)
2) ವರ್ತಮಾನ ಕಾಲದ ಭಗವಾನ್ ಧರ್ಮನಾಥ ತೀರ್ಥಂಕರರ ಲಾಂಛನ. (2)
3) ಶ್ರವಣಬೆಳಗೊಳದ ಗೊಮ್ಮಟ ಮೂರ್ತಿಯನ್ನು ನಿರ್ಮಿಸಿದ ಚಾವುಂಡರಾಯನ ತಂದೆಯ ಹೆಸರು (5)
4) ಜೂಜು, ಮದ್ಯಸೇವನೆ, ಮುಂತಾದ ವ್ಯಸನಗಳು ಇಷ್ಟಿವೆ. (2)
5) 14 ಮಹಾನದಿಗಳಲ್ಲಿ ಕೊನೆಯದು. (3)
9) 5 ಸಮಿತಿಗಳಲ್ಲಿ ಒಂದು, 4 ಮೊಳ ಮುಂದೆ ಜಮೀನು ನೋಡಿಕೊಂಡು ನಡೆಯುವುದು. (5)
10) ಪಂಚಭಾವಗಳಲ್ಲಿ ಒಂದಾದ ಇದು ಕರ್ಮಗಳ ಉಪಶಮನ.(5)
13) ಜೈನಧರ್ಮದ ಲಾಂಚನವಾಗಿರುವ ಇದು 3 ಲೋಕ, ಸಿದ್ಧಶಿಲೆ, ರತ್ನತ್ರಯ, ಸಿದ್ಧರನ್ನು ಸೂಚಿಸುತ್ತದೆ ಹಾಗು ಆಚಾರ್ಯ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು ಈ ಹೆಸರಿನ ಕೃತಿಯನ್ನು ರಚಿಸಿದ್ದಾರೆ.(5)
14) ಪಂಚಪರಮೇಷ್ಠಿಗಳಲ್ಲಿ ಮೊದಲನೆಯವರಾದ ಇವರು ಘಾತಿಕರ್ಮ ನಾಶಮಾಡಿದ ಕೇವಲಜ್ಞಾನಿಗಳು.(3)
17) ವರ್ತಮಾನ ಕಾಲದ ಪುಷ್ಪದಂತ ತೀರ್ಥಂಕರರನ್ನು ಈ ಹೆಸರಿನಿಂದಲೂ ಕರೆಯುವರು. (3)
18) ವರ್ತಮಾನ ಕಾಲದ 24 ತೀರ್ಥಂಕರರುಗಳಲ್ಲಿ ಅಭಿನಂದನ ತೀರ್ಥಂಕರರ ಲಾಂಛನ ತಿರುಗಿದೆ.(2)
19) ಸಂಸಾರಿ ಜೀವದ 2 ಬೇಧಗಳಲ್ಲಿ ಒಂದಾದ ಇದು ದ್ವೀಂದ್ರಿಯ, ತೀಂದ್ರಿಯ ಚತುರೀಂದ್ರಿಯ, ಪಂಚೇಂದ್ರಿಯ ಜೀವಗಳು

**ಎಡದಿಂದ ಬಲಕ್ಕೆ :**

1) ದಶಧರ್ಮಗಳಲ್ಲಿ 2ನೇಯದಾದ ಇದು ಗರ್ವ,ಅಹಂಕಾರ, ಮದ,ಅಭಿಮಾನ (ಮಾನಕಷಾಯ)ಗಳನ್ನು ಸಂಪೂರ್ಣವಾಗಿ ಬಿಟ್ಟು ನಮ್ರತೆಯಿಂದಿರುವುದು.(3)
4) ವರ್ತಮಾನ ಕಾಲದ 12 ಚಕ್ರವರ್ತಿಗಳಲ್ಲಿ ಒಬ್ಬರಾದ ಇವರು ಅಯೋಧ್ಯಾಪುರದ ಚಕ್ರವರ್ತಿಗಳಾಗಿದ್ದು ಅಜಿತನಾಥ ತೀರ್ಥಂಕರರ ಕಾಲದಲ್ಲಿದ್ದರು.
6) ದಶಧರ್ಮ ಹಾಗು ಪಂಚಮಹಾವ್ರತಗಳಲ್ಲಿ ಒಂದಾದ ಇದು ನಿಜವನ್ನೇ ನುಡಿಯುವ ವ್ರತ (2)
7) ಮೂಡಬಿದ್ರೆ ಶ್ರೀಗಳವರ ಪಟ್ಟಾಭಿಷೇಕವಾಗುವುದು ಜೋಡಿ ಪಾರ್ಶ್ವನಾಥ ಮೂರ್ತಿಯಿರುವ ಈ ಬಸದಿಯಲ್ಲಿ, (5)
8) 22 ಪರೀಷಹಗಳಲ್ಲಿ ಒಂದು ಮತ್ತು ಹಸಿವೆಯನ್ನು ಹೀಗೆನ್ನುವರು (2)
11) ಕಾಲದ 2 ಬೇಧಗಳಲ್ಲಿ ಒಂದು, ಈ ಕಾಲದಲ್ಲಿ ಧರ್ಮ, ಸತ್ಯ, ಆಯುಷ್ಯ ಮೊದಲಾದುವುಗಳು ಕ್ರಮವಾಗಿ ಕಡಿಮೆಯಾಗುತ್ತಾ ಹೋಗುತ್ತದೆ. (5)
12) ಗರ್ಭಾವತರಣ ಕಾಲದಲ್ಲಿ ಜಿನಮಾತೆ ಕಾಣುವ 16 ಕನಸುಗಳು (5)
14) ಭ.ವೃಷಭನಾಥರು ಪ್ರಜೆಗಳಿಗೆ ಕಲಿಸಿದ ಕರ್ಮಗಳಲ್ಲಿ ಒಂದು
15) 12 ಶೃತಾಂಗಗಳಲ್ಲಿ ಒಂದಾದ ಇದರಲ್ಲಿ ಪುಣ್ಯ ಪಾಪ ರೂಪವಾದ ಕರ್ಮಗಳ ಪರಿಪಾಕ ಸ್ವರೂಪದ ವರ್ಣನೆ ಇದೆ. (5)
16) ಭಗವಂತನ ಆರಾಧನೆಯಲ್ಲಿ ಕಾಮಬಾಣ ವಿಧ್ವಂಸವಾಗಲು ಅರ್ಪಿಸುವ ದ್ರವ್ಯತಿರುಗಿದೆ, (2)
20) ಚಕ್ರವರ್ತಿಗಳಿಗೆ ತಾನಾಗಿಯೇ ಒದಗಿ ಬರುವ 14 ರತ್ನಗಳಲ್ಲಿನ 7 ಜೀವರತ್ನಗಳಲ್ಲಿ ಒಂದಾದ ಇವನು ನದಿದಾಟುವ ಸಮಯದಲ್ಲಿ ಸಮರ್ಥನು ಸ್ಮರಣೆ ಮಾಡಿದ ತಕ್ಷಣ 7 ಉಪ್ಪರಿಗೆ ಮನೆ, ಕೋಟೆಯನ್ನು ನಿರ್ಮಿಸುವ ಸ್ಥಪತಿ ಶಿಲ್ಪಿ.
21) ಆತ್ಮನಲ್ಲಿ ಲೀನವಾಗುವುದು ಅಥವಾ ಧ್ಯಾನವನ್ನು ಹೀಗೆನ್ನುವರು. (3)

ರಚನೆ : **ಎ.ಸಿ.ಇಂದಿರಾ ಜಯಕುಮಾರ್, ಶ್ರವಣಬೆಳಗೊಳ**




### ಜಿನ ಪದಬಂಧ–03ರ ಉತ್ತರಗಳು

ಮೇಲಿನಿಂದ ಕೆಳಕ್ಕೆ :

1) ಅನುಪ್ರೇಕ್ಷೆ 2) ಅಚ್ಯುತ 3) ಚಾಮರ
4) ಭೂತಬಲಿ 5) ನಿಷ್ಕಷಾಯ 6) ಶ್ರೀವರ್ಮ
7) ರತ್ನತ್ರಯ 8) ಕೇಸರಿ 9) ಆರ್ಜವ
10) ಚಂದ್ರಪ್ರಭ 11) ಸನ್ಮತಿ 12) ವಿದೇಹ
13) ಯಕ್ಷೇಶ್ವರ 15) ಆಗಮ 16) ತಪ

ಎಡದಿಂದ ಬಲಕ್ಕೆ :

1) ಅಸ್ತಿಕಾಯ 2) ಅಭಯ 5) ನಿಶ್ಯಂಕಿತ
6) ಶ್ರೀಧರ 7) ರತ್ನವರ್ಮ 8) ಕೇವಲಿ
9) ಆಮ್ನಾಯ 10) ಚಂಪಾಪುರಿ 12) ವಿಜಯ
13) ಯಶಸ್ವತಿ 14) ಉತ್ಸಾಹ 15) ಆರಂಭ
17) ಮರುದೇವಿ 18) ನಿರ್ಜರ 19) ದೀಪ

## ಪ್ರಾಕೃತ ಕಲಿಯಿರಿ

**3.ವಚನ :** ನಾಮಪದ, ಸರ್ವನಾಮ ಮತ್ತು ವಿಶೇಷಣಗಳ ರೂಪವು ಒಂದು ಅಥವಾ ಅನೇಕವನ್ನು ಹೇಳುತ್ತಿದೆಯೇ ಎಂಬುದನ್ನು ತೋರಿಸುತ್ತದೆ, ಇದನ್ನು ವಚನ ಎಂದು ಕರೆಯಲಾಗುತ್ತದೆ. ಪ್ರಾಕೃತದಲ್ಲಿ ಏಕವಚನ ಮತ್ತು ಬಹುವಚನ ಎಂಬ ಎರಡು ಪದಗಳಿವೆ.

**ಏಕವಚನ :** ಒಂದು ಅರ್ಥವನ್ನು ಹೊಂದಿರುವ ನಾಮಪದ, ಸರ್ವನಾಮ ಮತ್ತು ವಿಶೇಷಣಗಳ ರೂಪವನ್ನು ಏಕವಚನ ಎಂದು ಕರೆಯಲಾಗುತ್ತದೆ.– ದೇವೋ, ದೇವೆ, ಮಾಉಲೋ, ಮಾಉಲೆ, ಣರೋ. ಣರೆ ಇತ್ಯಾದಿ.

**ಬಹುವಚನ :** ಒಂದಕ್ಕಿಂತ ಹೆಚ್ಚು ಅರ್ಥಗಳನ್ನು ಹೊಂದಿರುವ ನಾಮಪದ, ಸರ್ವನಾಮ ಮತ್ತು ವಿಶೇಷಣಗಳ ರೂಪವನ್ನು ಬಹುವಚನ ಎಂದು ಕರೆಯಲಾಗುತ್ತದೆ. ದೇವ, ಮಾಉಲಾ, ಣರಾ ಇತ್ಯಾದಿ. ಕೆಲವೊಮ್ಮೆ ಬಹುವಚನವನ್ನು ಗೌರವಾನ್ವಿತ ಮತ್ತು ಅಭಿಮಾನಕ್ಕಾಗಿ ಬಳಸಲಾಗುತ್ತವೆ.

**4. ಶಬ್ದ :** ಬಳಕೆಯ ದೃಷ್ಟಿಯಿಂದ ಶಬ್ದದಲ್ಲಿ ಐದು ಪ್ರಕಾರಗಳಿವೆ. ಎ. ನಾಮಪದ, ಬಿ. ಸರ್ವನಾಮ, ಸಿ. ವಿಶೇಷಣ, ಡಿ. ಕ್ರಿಯೆ, ಇ. ಅವ್ಯಯ,

**ಎ. ನಾಮಪದ :** ಯಾವುದೇ ವ್ಯಕ್ತಿ, ಜಾತಿ, ಸ್ಥಾನ, ವಸ್ತು, ವಿಚಾರ, ಭಾವ ಇತ್ಯಾದಿಗಳನ್ನು ನಾಮಪದ ಎಂದು ಕರೆಯಲಾಗುತ್ತದೆ. ರಹುಣಂದಣ, ಕಮಲ, ಸೀಯಾ, ಧೇಣು, ವಾರಿ ಇತ್ಯಾದಿ. ನಾಮಪದಗಳು ಲಿಂಗದ ಆಧಾರದ ಮೇಲೆ ಮೂರು ವಿಧಗಳು ಮತ್ತು ಪದ ರಚನೆಯ ಆಧಾರದ ಮೇಲೆ ನಾಲ್ಕು ವಿಧಗಳಾಗಿವೆ.

**ಲಿಂಗ ಭೇದ :** ಪುಲ್ಲಿಂಗ, ಸ್ತ್ರೀಲಿಂಗ ನಪುಂಸಕಲಿಂಗ.

**ಪದರಚನೆ :** ಅಕಾರಾಂತ ಆಕಾರಾಂತ, ಇಕಾರಾಂತ, ಈಕಾರಾಂತ, ಉಕಾರಾಂತ, ಊಕಾರಾಂತ.

ಸಾಮಾನ್ಯವಾಗಿ ಆಕಾರಾಂತ ಪದಗಳು ಪುಲ್ಲಿಂಗ ಮತ್ತು ನಪುಂಸಕ ಲಿಂಗಗಳಾಗುತ್ತವೆ. ಆಕಾರಾಂತ ಪದಗಳು ಸ್ತ್ರೀಲಿಂಗ ಆಗುತ್ತದೆ. ಇಕಾರಾಂತ, ಉಕಾರಾಂತ ಪದಗಳು ಪುಲ್ಲಿಂಗ ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗಗಳಾಗುತ್ತವೆ. ಆದರೆ ಪ್ರಾಕೃತದಲ್ಲಿ ಹಲವೆಡೆ ಒಂದೇ ವಸ್ತುವಿಗೆ ಬಳಸುವ ಬೇರೆ ಬೇರೆ ಪದಗಳೂ ಬೇರೆ ಬೇರೆ ಲಿಂಗಗಳೊಂದಿಗೆ ಕಾಣಸಿಗುತ್ತವೆ. ಉದಾಹರಣೆಗೆ ಪ್ರಾಕೃತದಲ್ಲಿ ಸ್ತ್ರೀ ಶಬ್ದಕ್ಕೆ ದಾರ, ಭಜ್ಜಾ ಮತ್ತು ಕಲತ್ತ ಪದಗಳಿವೆ. ಇವುಗಳಲ್ಲಿ ದಾರ–ಪುಲ್ಲಿಂಗ, ಭಜ್ಜಾ–ಸ್ತ್ರೀಲಿಂಗ ಮತ್ತು ಕಲತ್ತವು–ನಪುಂಸಕ ಲಿಂಗವಾಗಿದೆ. ಶರೀರಕ್ಕಾಗಿ ತಣು ಸ್ತ್ರೀಲಿಂಗ ದೇಹ ಪುಲ್ಲಿಂಗ ಮತ್ತು ಶರೀರವನ್ನು ನಪುಂಸಕ ಲಿಂಗದಲ್ಲಿ ಬಳಸಲಾಗುತ್ತದೆ. ನೀರಿಗೆ ಬಳಸುವ ಸಲಿಲ ಎಂಬ ಪದವು ಪುಲ್ಲಿಂಗವಾಗಿದೆ ಮತ್ತು ಉದಗ ಪದವು ನಪುಂಸಕವಾಗಿದೆ. ಅಂತೆಯೇ ಅನೇಕ ಅಕಾರಾಂತ ನಾಮಪದಗಳನ್ನು ಪುಲ್ಲಿಂಗ ಮತ್ತು ನಪುಂಸಕ ಲಿಂಗ ಎರಡೂ ಅರ್ಥಗಳಲ್ಲಿ ಬಳಸಲಾಗುತ್ತದೆ. ಆದ್ದರಿಂದ ಪ್ರಾಕೃತದಲ್ಲಿ ಲಿಂಗದ ಜ್ಞಾನವನ್ನು ನಿಘಂಟಿನ ಆಧಾರದ ಮೇಲೆ ಮಾತ್ರ ಮಾಡಬೇಕು.

## 13ನೇ ವರ್ಷದ ಪುಣ್ಯಸ್ಮರಣೆ * 7ನೇ ವರ್ಷದ ಪುಣ್ಯಸ್ಮರಣೆ







**ದಿ|| ಶ್ರೀಮತಿ ಕುಮುದಿನಿ ಮೇಘರಾಜ ಮಾಲಗತ್ತೆ**
ಉಗಾರಖುರ್ದ (ಬೆಳಗಾವಿ ಜಿಲ್ಲೆ)
ನಿಧನ : 07–11–2010

**ದಿ|| ಶ್ರೀ ಮೇಘರಾಜ ಯಶವಂತಪ್ಪ ಮಾಲಗತ್ತೆ**
ಉಗಾರಖುರ್ದ (ಬೆಳಗಾವಿ ಜಿಲ್ಲೆ)
ಜನನ : 01–01–1932 ನಿಧನ : 27–10–2016

ನೀವು ನಮ್ಮನ್ನಗಲಿ 13 ವರ್ಷಗಳು, 7 ವರ್ಷಗಳು ಸಂದರೂ ನಿಮ್ಮ ನೆನಪು, ಆದರ್ಶ ಜೀವನ ಹಚ್ಚು ಹಸಿರಾಗಿದೆ, ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಪ್ರಾರ್ಥಿಸುತ್ತೇವೆ.

ದುಃಖತಪ್ತರು

**ಮಾಲಗತ್ತೆ ಪರಿವಾರ, ವನಕುದ್ರೆ, ಬಡಾಳೆ, ಇಂಗಳೆ, ಗೋಗಿ, ಪರಿವಾರ ಮತ್ತು ಬಂಧು ಮಿತ್ರರು**

## ಭಾವಪೂರ್ಣ ಶ್ರದ್ಧಾಂಜಲಿ



ಜನನ 22–02–1943 ಮರಣ 27–09–2023

**ಶ್ರೀ ಜೈಪಾಲ ಬ್ರಹ್ಮಪ್ಪ ದಾಸನಹಳ್ಳಿ**
ನಿವೃತ್ತ ಜಿಪಿಜಿ ಹೈಸ್ಕೂಲ್ ಕ್ಲರ್ಕ್, ಹೂವಿನಹಡಗಲಿ

ಇವರು ದಿನಾಂಕ 27–9–2023 ಬುಧವಾರದಂದು 81ನೇ ವಯಸ್ಸಿನಲ್ಲಿ ಜಿನೈಕ್ಯರಾಗಿರುತ್ತಾರೆ. ವಿಜಯನಗರ ಜಿಲ್ಲೆ ಹೂವಿನಹಡಗಲಿಯ ಪ್ರೌಢಶಾಲೆಯಲ್ಲಿ ಸೇವೆ ಸಲ್ಲಿಸಿರುತ್ತಾರೆ. ಅಗಲಿದ ಆತ್ಮಕ್ಕೆ ಚಿರಶಾಂತಿಯನ್ನು ಕೋರಲಾಗಿದೆ.

ದುಃಖಭಾಗಿಗಳು

**ಪತ್ನಿ: ಚಂದ್ರಮತಿ ಮತ್ತು ಮಕ್ಕಳು**
**ದಾಸನಹಳ್ಳಿ ಕುಟುಂಬ ವರ್ಗದವರು**

## ಭಾವಪೂರ್ಣ ಶ್ರದ್ಧಾಂಜಲಿ



ಜನನ 15–08–1934 ಮರಣ 20–10–2023

ನಮ್ಮ ಪೂಜ್ಯ ಮಾತೋಶ್ರೀ
**ಶ್ರೀಮತಿ ಅನಂತಮತಿ ಜಿನ್ನಪ್ಪ ಎರೆಸೀಮಿ**
ಮಹಾವೀರ ಗಲ್ಲಿ, ಹುಬ್ಬಳ್ಳಿ

ಇವರು ದಿನಾಂಕ 20–10–2023 ಶುಕ್ರವಾರದಂದು 92ನೇ ವಯಸ್ಸಿನಲ್ಲಿ ನಿಧನರಾದರು. ಅಗಲಿದ ಆತ್ಮಕ್ಕೆ ಚಿರಶಾಂತಿಯನ್ನು ಕೋರುವವರು

* ದುಃಖಭಾಗಿಗಳು *

**ಮಕ್ಕಳಾದ : ಅಜಯಕುಮಾರ್, ಧನಪಾಲ್, ಶ್ರೇಯಾಂಸಕುಮಾರ್, ಪದ್ಮರಾಜ ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಎರೆಸೀಮಿ ಅಪಾರ ಬಂಧು–ಬಳಗ, ಮಹಾವೀರ ಗಲ್ಲಿ, ಹುಬ್ಬಳ್ಳಿ**

## ಜೈನ್ ಮಿಲನ್ (ಬೆಂಗಳೂರು ಸೆಂಟ್ರಲ್) ಸಭೆ



**ಬೆಂಗಳೂರು, ಸೆ. 24 :** ಜೈನ್ ಮಿಲನ್ (ಬೆಂಗಳೂರು ಸೆಂಟ್ರಲ್)ನ 441ನೇ ಮಾಸಿಕ ಸಭೆಯು ಮಾಗಡಿ ರಸ್ತೆಯ ಭಗವಾನ್ ಶ್ರೀ ಪಾರ್ಶ್ವನಾಥ ಜಿನ ಮಂದಿರದಲ್ಲಿ ಜರುಗಿತು. ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಧರ್ಮಸ್ಥಳದ ಶ್ರೀ ಸುರೇಂದ್ರ ಕುಮಾರ್‌ರವರು, ಶ್ರೀ ಎ. ಆರ್. ನಿರ್ಮಲ್ ಕುಮಾರ್ ಮತ್ತು ಎ.ಎಂ. ಶೋಭಾ, ಅನುರಾಧಾ ದೇಸಾಯಿ ಉಪಸ್ಥಿತರಿದ್ದರು.

## ಅನುರಾಧಾ ಅ. ಕಂಚಿರವರಿಗೆ ಪಿಎಚ್.ಡಿ.



ಬೆಳಗಾವಿ : ಮಹಾವೀರ ವಾಣಿಜ್ಯಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಅನುರಾಧಾ ಅ. ಕಂಚಿ ಅವರಿಗೆ **ಕನ್ನಡ ಉದಾರವಾದಿ ಕಾವ್ಯದ ತಾತ್ವಿಕ ಸ್ವರೂಪ** ಎಂಬ ಸಂಶೋಧನ ಮಹಾ ಪ್ರಬಂಧಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿ ಪ್ರದಾನ ಮಾಡಿದೆ.

## ಅಲ್ಪಸಂಖ್ಯಾತರ ಆಯೋಗದ ಸಭೆಯಲ್ಲಿ ಕೆಜೆಎ ಮನವಿಪತ್ರ



**ಬೆಂಗಳೂರು ಅ. 13 :** ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗದ ಸದಸ್ಯರಾದ ಶ್ರೀಮತಿ ರಿಂಚನ್ ಲಾಹ್ಮೋರವರು ಬೆಂಗಳೂರಿನ ಕಛೇರಿಯಲ್ಲಿ ಅಲ್ಪಸಂಖ್ಯಾತರ ಸೌಲಭ್ಯ ಹಾಗೂ ಕುಂದುಕೊರತೆಗಳ ಬಗ್ಗೆ ಸಭೆ ನಡೆಸಿದರು. ಈ ಸಂದರ್ಭದಲ್ಲಿ ಕರ್ನಾಟಕ ಜೈನ ಸಮುದಾಯದ ಪರವಾಗಿ ಕರ್ನಾಟಕ ಜೈನ್ ಅಸೋಸಿಯೇಷನ್ನಿನ ಕಾರ್ಯದರ್ಶಿ ರಾಜಕೀರ್ತಿ, ಕೆಜೆಎ ಕಾರ್ಯಕಾರಿ ಸಮಿತಿ ಸದಸ್ಯರು, ದಿಗಂಬರ ಜೈನ ಮಹಾವೀರ ಸಂಘದ ಅಧ್ಯಕ್ಷರಾದ ಜೆ. ಪ್ರಕಾಶ್ ಹಾಗೂ ಆಯೋಗದ ಮಾಜಿ ಸದಸ್ಯರಾದ ಸುರೇಶ್ ಜೈನ್ ಅವರು ಭಾಗವಹಿಸಿ, ಜೈನರಿಗೆ ವಿಶೇಷ ಸ್ಥಾನಮಾನ ನೀಡಲು ಪ್ರತ್ಯೇಕ ಜೈನ ನಿಗಮ ಸ್ಥಾಪನೆ ಮಾಡಬೇಕು ಮತ್ತು ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಆರ್ಥಿಕ ಸೌಲಭ್ಯ ಸ್ಥಗಿತಗೊಂಡಿದ್ದು, ಅದನ್ನು ಮತ್ತೆ ಜಾರಿಗೆ ತರುವಂತೆ ಹಾಗೂ ಜೈನರಿಗೆ ಸಿಗುತ್ತಿದ್ದ ಹಲವಾರು ಸೌಲಭ್ಯಗಳು ನಿಲ್ಲಿಸಿರುವುದನ್ನು ಪುನಃ ಮುಂದುವರೆಸಬೇಕೆಂದು ಮನವಿ ಮಾಡಿದರು.

## 'ಶಿಖರ್ಜಿಯಲ್ಲಿ ನಿರಂಜನನ ದರ್ಶನ' ಹಾಗೂ 'ಜಿನಭಕ್ತಿ ಲಹರಿ' ಕೃತಿಗಳ ಲೋಕಾರ್ಪಣೆ



ನಾರಾವಿ, ಅ. 23 : ನಿರಂಜನ್ ಜೈನ್ ಕುದ್ಯಾಡಿ ರಚಿಸಿರುವ ಶಿಖರ್ಜಿಯಲ್ಲಿ ನಿರಂಜನನ ದರ್ಶನ ಹಾಗೂ ಜಿನಭಕ್ತಿ ಲಹರಿ ಕೃತಿ ಲೋಕಾರ್ಪಣಾ ಕಾರ್ಯಕ್ರಮ ಧರ್ಮಶ್ರೀ ಸಭಾಭವನದಲ್ಲಿ ಜರಗಿತು. ಮೂಡುಬಿದಿರೆ ಜೈನಮಠದ ಪ.ಪೂ. ಭಾರತಭೂಷಣ ಡಾ. ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯವರ್ಯ ಸ್ವಾಮೀಜಿಯವರು ಪಾವನ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಭಾರತೀಯ ಜೈನ್ ಮಿಲನ್‌ನ ರಾಷ್ಟ್ರೀಯ ಕಾರ್ಯಾಧ್ಯಕ್ಷ ಡಿ. ಸುರೇಂದ್ರ ಕುಮಾರ್ ಮತ್ತು ಶ್ರೀಮತಿ ಅನಿತಾ ಸುರೇಂದ್ರ ಕುಮಾರ್‌ರವರು ನಿರಂಜನ್ ಜೈನ್ ಅವರಿಗೆ ಶುಭಹಾರೈಸಿದರು. ರತ್ನತ್ರಯ ಕ್ರಿಯೇಷನ್ಸ್‌ನ ಮುಖ್ಯಸ್ಥೆ ಬೆಂಗಳೂರಿನ ಡಾ. ನೀರಜಾ ನಾಗೇಂದ್ರ ಕುಮಾರ್, ಕನ್ನಡ ಭಾಷಾ ಪಂಡಿತ ಮೂಡುಬಿದಿರೆಯ ಬಿ. ಪಿ. ಸಂಪತ್ ಕುಮಾರ್, ನ್ಯಾಯವಾದಿ ಮೂಡುಬಿದಿರೆಯ ಶ್ವೇತ ಕೆ. ಮೊದಲಾದವರು ಉಪಸ್ಥಿತರಿದ್ದರು.

## ಯುವರಾಜ ಜೈನ್‌ರವರಿಗೆ ಎಜುಕೇಶನ್ ಎಕ್ಸಲೆನ್ಸ್ ಪ್ರಶಸ್ತಿ ಮತ್ತು ಸಮಾಜ ಮಂದಿರ ಪುರಸ್ಕಾರ



**ನವದೆಹಲಿ, ಸೆ. 30 :** ಅಂತಾರಾಷ್ಟ್ರೀಯ ಎಜುಕೇಶನ್ ಎಂಡ್ ಮ್ಯಾನೇಜ್ಮೆಂಟ್ ಸಂಸ್ಥೆಯು ಕೊಡಮಾಡುವ ಪ್ರತಿಷ್ಠಿತ **ಗ್ಲೋಬಲ್ ಅಂಬಾಸಿಡೆರ್ ಆಫ್ ಎಜುಕೇಶನ್ ಎಕ್ಸಲೆನ್ಸ್ ಪ್ರಶಸ್ತಿಯನ್ನು** ಕಳೆದ ಮೂರು ದಶಕಗಳ ಶಿಕ್ಷಣ ಕ್ಷೇತ್ರದ ಸಾರ್ಥಕ ಸೇವೆಯನ್ನು ಪರಿಗಣಿಸಿ ಪ್ರಸಕ್ತ ಸಾಲಿನಲ್ಲಿ ಮೂಡಬಿದಿರೆಯ ಎಕ್ಸಲೆಂಟ್ ವಿದ್ಯಾ ಸಂಸ್ಥೆಗಳ ಅಧ್ಯಕ್ಷರಾದ **ಯುವರಾಜ ಜೈನ್** ಇವರಿಗೆ ನೀಡಿ ಗೌರವಿಸಿದೆ.

ಜೊತೆಗೆ ಮೂಡುಬಿದಿರೆಯ ಸಮಾಜ ಮಂದಿರ ಸಭಾ ವತಿಯಿಂದ ಆರಂಭಗೊಂಡ 76ನೇ ದಸರಾ ಸಾಹಿತ್ಯ ಮತ್ತು ಸಾಂಸ್ಕೃತಿಕ ಉತ್ಸವ ದಸರಾ ಸಂಭ್ರಮದಂದು **ಯುವರಾಜ ಜೈನ್**ರವರಿಗೆ **ಸಮಾಜ ಮಂದಿರ ಪುರಸ್ಕಾರವನ್ನು** ನೀಡಿ ಗೌರವಿಸಲಾಯಿತು.




## ಸ್ವಾದಿ ಶ್ರೀಗಳವರಿಂದ ಕೃತಿಗಳ ಲೋಕಾರ್ಪಣೆ




**ಸೋಂದಾ, ಅ. 24 : ಶ್ರೀಕ್ಷೇತ್ರ ಸ್ವಾದಿ ದಿಗಂಬರ ಜೈನ ಮಠ ಟ್ರಸ್ಟ್ ಹಾಗೂ ಶ್ರೀ ಸ್ವಾದಿ ಪ್ರಕಾಶನ ವತಿಯಿಂದ ಶರನ್ನವರಾತ್ರಿ ಉತ್ಸವ–2023 ಕಾರ್ಯಕ್ರಮದಲ್ಲಿ ಪ.ಪೂ. ಸ್ವಸ್ತಿಶ್ರೀ ಭಟ್ಟಾಕಲಂಕ ಭಟ್ಟಾರಕ ಸ್ವಾಮೀಜಿಯವರು ವಿರೇಂದ್ರ ಬೇಗೂರುರವರು ರಚಿಸಿರುವ 'ಸಮುದ್ಧರಣ' ಹಾಗೂ ಶ್ರೀಕ್ಷೇತ್ರಪಾಲರ ಆರಾಧನಾ ಮತ್ತು ಪೂಜಾ ಸಂಗ್ರಹ ಕೃತಿಗಳನ್ನು ಬಿಡುಗಡೆ ಮಾಡಿದರು.**



# ಶ್ರೀ ದಿಗಂಬರ ಮಹಾವೀರ ಸಂಘ, ವಿಮಾನಪುರ (ರಿ)

ಹೆಚ್.ಎ.ಎಲ್., (ಕೋನೇನಅಗ್ರಹಾರ), ವಿಮಾನಪುರ ಪೋಸ್ಟ್, ಬೆಂಗಳೂರು – 560 017.

Phone : 080 25223014, +91 96322 88834

## ದಿನಾಂಕ 24-09-2023 ನೇ ತಾರೀಖು ನಡೆದ ಸಂಘದ ಚುನಾವಣೆಯಲ್ಲಿ ಚುನಾಯಿತರಾದ ಕಾರ್ಯಕಾರಿ ಸಮಿತಿ ಸದಸ್ಯರುಗಳು


ವಿ. ಪ್ರಶಾಂತ್
ಅಧ್ಯಕ್ಷರು


ರಾಜೇಂದ್ರ ಚೌಗುಲೆ .ಎಂ
ಉಪಾಧ್ಯಕ್ಷರು


ಎಂ.ಪಿ. ಪಾರ್ಶ್ವನಾಥ್
ಪ್ರಧಾನ ಕಾರ್ಯದರ್ಶಿ


ಡಾ. ನೀರಜಾ .ಎನ್. ಕುಮಾರ್
ಸಹ ಕಾರ್ಯದರ್ಶಿ


ಯಶಸ್ ಜೈನ್ .ಆರ್
ಸಹ ಕಾರ್ಯದರ್ಶಿ


ಪಿ.ಎ. ರಾಜ್
ಖಜಾಂಚಿ

### ಕಾರ್ಯಕಾರಿ ಸಮಿತಿ ಸದಸ್ಯರುಗಳು


ಅಭಿಜಿತ್ .ಪಿ. ಜೈನ್


ಬಿ. ಆದಿರಾಜಯ್ಯ


ಬಿ. ಸಿ. ಅನಂತರಾಜು


ಕೆ. ದೇವನ್


ಹೆಚ್. ಪಿ. ಕನಕರಾಜು


ಮಯೂರ್ .ಸಿ


ಪ್ರೀತಮ್ .ಪಿ. ಜೈನ್


ಎಸ್. ಕೆ. ರಾಜು


ಸುರೇಶ್‌ಕುಮಾರ್ ಬಿ.ವಿ.


ವಿಜಯಲಕ್ಷ್ಮಿ

### ಕಾರ್ಯಕಾರಿ ಸಮಿತಿ ಮಹಿಳಾ ಮೀಸಲಾತಿ ಸದಸ್ಯರುಗಳು


ನಾಗರತ್ನ .ವಿ


ಪದ್ಮಶ್ರೀ .ಬಿ. ಆರ್


ಶಶಿಕಲಾ .ಬಿ

# ಹದಿನೈದು ದಿನಗಳು ಜರುಗಿದ ಅಖಂಡ ಣಮೋಕಾರ ಮಂತ್ರ ಪಠಣ ಶುಭ ಸಂಪನ್ನ




ಶ್ರವಣಬೆಳಗೊಳ, ಅ. 19 : ಸಮಸ್ತ ಪೂಜ್ಯ ತ್ಯಾಗಿಗಳ ಪಾವನ ಸಾನ್ನಿಧ್ಯ ಮತ್ತು ಪೂಜ್ಯ ಗಣಿನೀ ಆರ್ಯಿಕಾಶ್ರೀ 105 ವಿಶಿಷ್ಟಮತಿ ಮಾತಾಜಿಯವರ ಅಪೇಕ್ಷೆಯಂತೆ ಪೂಜ್ಯ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಅಕ್ಟೋಬರ್ 3 ರಿಂದ 18ರವರೆಗೆ ಜರುಗಿದ ಅಖಂಡ ಣಮೋಕಾರ ಮಂತ್ರ ಪಠಣ ಸಂಪನ್ನವಾದ ಶುಭಸಂದರ್ಭದಲ್ಲಿ ಶ್ರೀಕ್ಷೇತ್ರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಜರುಗಿತು.

# ಶ್ರೀಕ್ಷೇತ್ರದ ಜೈನಮಠದ ಬಸದಿಯ ನೆಲಕ್ಕೆ ಕಲ್ಲುಹಾಸು ಹಾಗೂ ಗೋಡೆಗಳಿಗೆ ಕ್ಲ್ಯಾಡಿಂಗ್ ಅಳವಡಿಕೆಯ ಕಾರ್ಯ ಪ್ರಗತಿಯಲ್ಲಿ







**ದಾನ ನೀಡಲು**
**ಬ್ಯಾಂಕ್ ಖಾತೆಯ ವಿವರ**

Account Name:
SDJMI Managing Committee Trust (R) Development A/c

A/c No :
64207078669

Bank :
State Bank of India

Branch : Shravanabelagola

IFSC Code: SBIN0040369

ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳವರು ತಮ್ಮ ದೀಕ್ಷಾಗುರುಗಳಾದ ಪ್ರಾತಃಸ್ಮರಣೀಯ ಪ.ಪೂ. ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳವರ ಆಶಯದಂತೆ ಶ್ರೀಮಠದಲ್ಲಿ ನೆಲಕ್ಕೆ ಕಲ್ಲುಹಾಸು ಹಾಗೂ ಸುತ್ತಲಿನ ಗೋಡೆಗಳಿಗೆ ಕ್ಲ್ಯಾಡಿಂಗ್ ಅಳವಡಿಕೆಯ ಕಾರ್ಯ ಪ್ರಗತಿಯಲ್ಲಿದೆ. ಎರಡು ಗರ್ಭಗೃಹದ ಬಾಗಿಲಿಗೆ ರಜತ ಕವಚ, ಚೌಕಟ್ಟು, ಪ್ರಭಾವಳಿ, ಭಾಮಂಡಲ, ತ್ರಿಮೇಕಲಾ ಪೀಠ ನಿರ್ಮಾಣ ಕಾರ್ಯ, ಶ್ರೀಕ್ಷೇತ್ರ ಜೈನಮಠಕ್ಕೆ ಸೇರಿದ ಬಸದಿಗಳು, ಕಟ್ಟಗಳ ಜೀರ್ಣೋದ್ಧಾರ ಕಾರ್ಯ ಪ್ರಗತಿಯಲ್ಲಿದೆ. ಈ ಶುಭ ಸಂಕಲ್ಪದ ಕಾರ್ಯಕ್ಕೆ ಭಕ್ತಾದಿಗಳು ತನು, ಮನ, ಧನ ಸಹಯೋಗದೊಂದಿಗೆ ದಾನ ನೀಡಿ ಪುಣ್ಯಕಾರ್ಯದಲ್ಲಿ ಭಾಗಿಯಾಗಬಹುದು.




ಬಾಹುಬಲಿ ಪ್ರಾಕೃತ ವಿದ್ಯಾಪೀಠ (ರಿ)

## ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆ

**ಶ್ರೀಧವಲತೀರ್ಥಂ, ಶ್ರವಣಬೆಳಗೊಳ**

ಸಂಸ್ಥೆಯಲ್ಲಿ ಪ್ರಾಚೀನ ಅಮೂಲ್ಯ ಹಸ್ತಪ್ರತಿಗಳನ್ನು ಸಂಗ್ರಹ ಮಾಡಿ ಸಾಂಪ್ರದಾಯಿಕ ಪದ್ಧತಿ ಮತ್ತು ಆಧುನಿಕ ಪರಿಕರಗಳ ಸಹಾಯದಿಂದ ಸ್ವಚ್ಛತೆ ಮಾಡಿ ಸಂರಕ್ಷಣೆಯನ್ನು ಮಾಡಲಾಗುತ್ತಿದೆ. ಸಂಸ್ಥೆಯ ಸಂಸ್ಥಾಪಕರಾದ **ಪ್ರಾತಃಸ್ಮರಣೀಯ ಪರಮಪೂಜ್ಯ ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ** ಅಪೇಕ್ಷೆಯಂತೆ ಹಾಗೂ **ಅಧ್ಯಕ್ಷರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ** ಮಾರ್ಗದರ್ಶನದಲ್ಲಿ ಹಸ್ತಪ್ರತಿಗಳ ಸಂರಕ್ಷಣೆ, ಸಂಪಾದನೆ ಮತ್ತು ಪ್ರಕಾಶನಾ ಕಾರ್ಯವು ಸಂಸ್ಥೆಯಲ್ಲಿ ನಿರಂತರವಾಗಿ ನಡೆಯುತ್ತಿದೆ. ಸದ್ಧರ್ಮ ಬಂಧುಗಳು ತಮ್ಮಲ್ಲಿ ಅಥವಾ ಪರಿಚಯಸ್ಥರ ಬಳಿ ಇರುವ ತಾಡೋಲೆ ಹಾಗೂ ಕಾಗದದ ಹಸ್ತಪ್ರತಿಗಳನ್ನು ಸಂಸ್ಥೆಗೆ ಕೊಡುಗೆಯಾಗಿ ನೀಡಬಹುದು ಅಥವಾ ತಮ್ಮ ಮನೆಯಲ್ಲಿಯೇ ಸಂರಕ್ಷಿಸಿಟ್ಟುಕೊಳ್ಳಲು ಬಯಸಿದ್ದಲ್ಲಿ ಸಂಸ್ಥೆಯ ಹಸ್ತಪ್ರತಿ ತಜ್ಞರು ತಮ್ಮಲ್ಲಿಗೆ ಬಂದು ಸಂರಕ್ಷಣಾ ಕಾರ್ಯವನ್ನು ಮಾಡಿಕೊಡಲಿದ್ದಾರೆ.

**ಹಸ್ತಪ್ರತಿಗಳ ಸಂರಕ್ಷಣೆ, ಅನುವಾದ ಹಾಗೂ ಪ್ರಕಾಶನ ಕಾರ್ಯಕ್ಕೆ ದಾನ ನೀಡುವ ಮೂಲಕ ಜಿನವಾಣಿ ಸೇವೆಯಲ್ಲಿ ಭಾಗಿಗಳಾಗಬಹುದು.**




ಹೆಚ್ಚಿನ ಮಾಹಿತಿಗೆ :
ಹಜಾರಿ ಪಾರ್ಶ್ವನಾಥ ಶಾಸ್ತ್ರಿ
9481335108

## ಚೆನ್ನೈನ ಶ್ರೀಮತಿ ಸರಿತಾ ಎಂ.ಕೆ. ಜೈನ್‌ರವರಿಂದ ಬಾಹುಬಲಿ ಆಸ್ಪತ್ರೆಗೆ ವೈದ್ಯಕೀಯ ಉಪಕರಣ ಕೊಡುಗೆ



ಶ್ರವಣಬೆಳಗೊಳ, ಅ. 23 : ಪ್ರತಿನಿತ್ಯ ನೂರಾರು ರೋಗಿಗಳಿಗೆ ಉಚಿತ ಔಷಧೋಪಚಾರ ನೀಡುತ್ತಿರುವ ಶ್ರೀ ಬಾಹುಬಲಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವ ಉದ್ದೇಶದೊಂದಿಗೆ ಅಖಿಲ ಭಾರತವರ್ಷೀಯ ದಿಗಂಬರ ಜೈನ ತೀರ್ಥಕ್ಷೇತ್ರ ಕಮಿಟಿಯ ಪೂರ್ವ ಅಧ್ಯಕ್ಷರು ಹಾಗೂ ಗೊಮ್ಮಟೇಶ್ವರ ಭ. ಶ್ರೀ ಬಾಹುಬಲಿ ಮಹಾಮಸ್ತಕಾಭಿಷೇಕ ಮಹೋತ್ಸವ ಸಮಿತಿ–2018ರ ರಾಷ್ಟ್ರೀಯ ಅಧ್ಯಕ್ಷೆ ಚೆನ್ನೈನ ಮಹಾನ್ ದಾನಿಗಳಾದ ಶ್ರೀಮತಿ ಸರಿತಾ ಮಹೇಂದ್ರಕುಮಾರ್ ಜೈನ್ ಇವರು ಆಸ್ಪತ್ರೆಯ ದಂತ ವಿಭಾಗಕ್ಕೆ ಸುಮಾರು 9.80 ಲಕ್ಷ ವೆಚ್ಚದ ಡೆಂಟಲ್ ಒ.ಪಿ.ಜಿ ಉಪಕರಣವನ್ನು ದಾನವಾಗಿ ನೀಡಿರುತ್ತಾರೆ.

ಪ.ಪೂ. ಜಗದ್ಗುರು ಶ್ರೀಮದಭಿನವ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳವರು ಆಯುಧಪೂಜೆ ದಿನದಂದು ಒ.ಪಿ.ಜಿ ಉಪಕರಣವನ್ನು ಲೋಕಾರ್ಪಣೆಗೊಳಿಸಿ ದಾನಿಗಳಿಗೆ ಶುಭ ಹಾರೈಸಿದರು.

## ಭಂಡಾರಿ ಬಸದಿಯ ಮುಂಭಾಗದ ಓಕಳಿಕೊಳ ಪುನರ್ ನಿರ್ಮಾಣ




ಶ್ರವಣಬೆಳಗೊಳ : ಶ್ರೀಕ್ಷೇತ್ರದ ಭಂಡಾರಿ ಬಸದಿ ಮುಂಭಾಗದಲ್ಲಿರುವ ಓಕಳಿ ಕೊಳದಲ್ಲಿ ವಾರ್ಷಿಕ ರಥೋತ್ಸವದ ಅಂತಿಮ ದಿನದಂದು ಓಕಳಿ ಆಚರಿಸಿ ನಂತರ ಊರಿನಲ್ಲಿ ಮೆರವಣಿಗೆ ನಡೆಸಲಾಗುತ್ತಿತ್ತು. ಪ್ರತಿ ವರ್ಷ ಜಾತ್ರೆ ಆದನಂತರ ಈ ಕೊಳವನ್ನು ಮುಚ್ಚಿ ಮುಂದಿನ ವಾರ್ಷಿಕ ಜಾತ್ರೆಯ ಸಮಯದಲ್ಲಿ ಪುನಃ ತೆರೆಯಲಾಗುತ್ತಿತ್ತು. ಆದರೆ ಸುಮಾರು 50–60 ವರ್ಷಗಳಿಂದ ಈ ಓಕಳಿ ಕೊಳವನ್ನು ತೆರೆದಿರಲಿಲ್ಲ. ಅದರ ವಿಷಯ ತಿಳಿದ ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳವರು ಹಿಂದಿನ ಪರಂಪರೆಯನ್ನು ಪರಿಚಯಿಸುವ ಉದ್ದೇಶದಿಂದ ಈ ಓಕಳಿಕೊಳವನ್ನು ಉತ್ಖನನ ಮಾಡಿಸಿರುತ್ತಾರೆ.

Edited, Printed & Published by : Charukeerthi Bhattaraka Swamiji and Owned by Shri Digambar Jain Matha, S.D.J.M.I. Managing Committee Trust (R), Shravanabelagola-573 135.
Printer : Omkar Offset Printers, Bangalore Email : gommatavani1980@gmail.com Gommatavani Office Contact No. : 8660118443